# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

[ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ]

ನಿಗಮದ ನೊಂದಾಯಿತ ಕಚೇರಿ ವಿಳಾಸ : ನಂ. 29, ವಿಜಯನಗರ 2ನೇ ಹಂತ, ಹಿನಕಲ್ ಮೈಸೂರು-570017.,

ಫೋನ್ ನಂ. 0821 2417104/110, ಫ್ಯಾಕ್ಸ್ ನಂ. 0821 2417107, http://www.cescmysore.org

CIN- U40109KA2004SGC035177

ಫೋನ್ : 08232-225995

ಇಮೇಲ್ : aee.csd1@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ರವರ ಕಛೇರಿ, ಚಾವಿಸನಿನಿ, ಮಂಡ್ಯ ಉಪ ವಿಭಾಗ,
ಮಂಡ್ಯ-571401,


ಕ್ರ ಸಂ : ಸಕಾನಿಇಂ(ವಿ)/ಮ.ಉ.ವಿ/17-18/ 2836

ದಿನಾಂಕ : 13-11-2017 14

## ಜನ ಸಂಪರ್ಕ ಸಭಾ ನಡಾವಳಿ

ದಿನಾಂಕ 13-11-2017 ರ ಸಮಯ 11.00 ಗಂಟೆಗೆ ಚಾವಿಸನಿನಿ., ಮಂಡ್ಯ ಉಪ ವಿಭಾಗದ ಆವರಣದಲ್ಲಿ ಮಂಡ್ಯ ವೃತ್ತದ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ಹಾಗೂ ಈ ಕೆಳಕಂಡಂತೆ ಹಾಜರಿದ್ದ ಅಧಿಕಾರಿಗಳು ಹಾಗೂ ಗ್ರಾಹಕರುಗಳ / ದೂರುದಾರರ ಸಮ್ಮುಖದಲ್ಲಿ ಜನಸಂಪರ್ಕ ಸಭೆಯನ್ನು ನಡೆಸಲಾಯಿತು.

**ಹಾಜರಿದ್ದ ಅಧಿಕಾರಿಗಳು :**

1. ಶ್ರೀ ಎ.ಎಸ್. ರವಿಶಂಕರ್, ಪ್ರಭಾರ ಅ.ಇಂ(ವಿ) ಮತ್ತು ಕಾ.ನಿ.ಇಂ(ವಿ), ಮಂಡ್ಯ ವಿಭಾಗ.
2. ಶ್ರೀ ಇ. ರವಿಶಂಕರ್, ಕಾ.ನಿ.ಇಂ(ವಿ), ಮಂಡ್ಯ ವೃತ್ತ
3. ಶ್ರೀ ಕೆ.ಎಸ್. ಶಿವಕುಮಾರ್, ಸ.ಕಾ.ನಿ.ಇಂ(ವಿ), ಮಂಡ್ಯ ಉಪ ವಿಭಾಗ
4. ಶ್ರೀ ಬಿ. ಶಿವಮಾದಯ್ಯ, ಸಹಾಯಕ ಲೆಕ್ಕಾಧಿಕಾರಿ ಪ್ರಭಾರ, ಮಂಡ್ಯ ಉಪ ವಿಭಾಗ
5. ಶ್ರೀ ಮಹೇಶ್, ಸ.ಇಂ(ವಿ), ಎಂ.ಸಿ. ರಸ್ತೆ ಶಾಖೆ, ಮಂಡ್ಯ ಉಪ ವಿಭಾಗ.
6. ಶ್ರೀ ವಿನಯ್‌ಕುಮಾರ್. ಸ.ಇಂವಿ), ಷುಗರ್‌ಟೌನ್ ಶಾಖೆ, ಮಂಡ್ಯ ಉಪ ವಿಭಾಗ.
7. ಶ್ರೀ ಮಂಜುನಾಥ್, ಕಿ.ಇಂ(ವಿ), ಷುಗರ್‌ಟೌನ್ ಶಾಖೆ, ಮಂಡ್ಯ ಉಪ ವಿಭಾಗ.
8. ಶ್ರೀಮತಿ ಪುಷ್ಪಾಂಜಲಿ, ಸ.ಇಂ(ವಿ), ಗುತ್ತಲು ಶಾಖೆ, ಮಂಡ್ಯ ಉಪ ವಿಭಾಗ.
9. ಶ್ರೀ ಶಿವಕುಮಾರ್. ಕೆ.ಹೆಚ್., ಕಿ.ಇಂ(ವಿ), ಗುತ್ತಲು ಶಾಖೆ, ಮಂಡ್ಯ ಉಪ ವಿಭಾಗ.
10. ಶ್ರೀ ನಂಜಯ್ಯ, ಕಿ.ಇಂ(ವಿ), ಹೊಸಹಳ್ಳಿ ಶಾಖೆ, ಮಂಡ್ಯ ಉಪ ವಿಭಾಗ.

ಶ್ರೀ ಮಹೇಶ್, ಸಹಾಯಕ ಇಂಜಿನಿಯರ್ (ವಿ) ರವರ ಪ್ರಾರ್ಥನೆಯೊಂದಿಗೆ ಜನ ಸಂಪರ್ಕ ಸಭೆಯು ಪ್ರಾರಂಭವಾಯಿತು. ಶ್ರೀ ಬಿ. ಶಿವಮಾದಯ್ಯ, ಹಿರಿಯ ಸಹಾಯಕ ರವರು ಸಭೆಗೆ ಬಂದ ಅಧಿಕಾರಿ ವರ್ಗದವರನ್ನು ಗ್ರಾಹಕರು / ಮತ್ತು ಪತ್ರಿಕಾ ಮಾಧ್ಯಮದ ಪ್ರತಿನಿಧಿಗಳನ್ನು ಸಭೆಗೆ ಸ್ವಾಗತಿಸಿದರು.

**ಹಾಜರಿದ್ದ ಗ್ರಾಹಕರುಗಳು / ದೂರುದಾರರು (ಸ್ವೀಕೃತ ದೂರುಗಳ ಸಂಖ್ಯೆ 03)**

| ಸ್ವೀಕರಿಸಿದ ಅರ್ಜಿಗಳು | ಪುರಸ್ಕೃತ ಅರ್ಜಿಗಳು | ಬೇರೆ ಉಪ ವಿಭಾಗದ ಅರ್ಜಿ |
|---|---|---|
| 2 | 2 | 1 |

1. ಶ್ರೀ ಎಂ.ಎಸ್.ಕೃಷ್ಣ, ಭಗವಾನ್ ಎಲೆಕ್ಟ್ರಿಕಲ್ಸ್ ವಿದ್ಯುತ್ ಗುತ್ತಿಗೆದಾರರು ಮಂಡ್ಯ ರವರು ಸಭೆಯಲ್ಲಿ ಹಾಜರಿದ್ದು, ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಅರ್ಜಿಗಳನ್ನು ಶೀಘ್ರದಲ್ಲಿ ವಿಲೇವಾರಿ ಮಾಡಲು ಮೌಖಿಕವಾಗಿ ತಿಳಿಸಿದರು. ಕಡತಗಳನ್ನು ಸಂಬಂಧಪಟ್ಟ ಶಾಖಾ ಕಛೇರಿಗಳಿಗೆ ತ್ವರಿತವಾಗಿ ರವಾನಿಸಲು ಸಹಾಯಕ ಇಂಜಿನಿಯರ್(ತಾ) ರವರಿಗೆ ಕ್ರಮ ಕೈಗೊಳ್ಳಲು ನಿರ್ದೇಶಿಸಲಾಯಿತು.
2. ಶ್ರೀ ಮುನಿಯಪ್ಪ ಬಿನ್ ಕರಿಯಪ್ಪ, ಹಾಲಹಳ್ಳಿಕೆರೆ, 1ನೇ ಕ್ರಾಸ್, ರಾಘವೇಂದ್ರ ನಿಲಯ, ಮಂಡ್ಯ ರವರು ಹಾಜರಿದ್ದು, ಮನೆಯ ಮೇಲೆ ಕೈಗೆ ಸಿಗುವಂತೆ ವಿದ್ಯುತ್ ಲೈನ್ ಹಾದು ಹೋಗಿದ್ದು ಅನಾಹುತ ಉಂಟಾಗುವ ಮುಂಚೆ ಸರಿಪಡಿಸಿಕೊಡಬೇಕೆಂದು ಲಿಖಿತ ಮನವಿ ಸಲ್ಲಿಸಿದರು. ಕಾಮಗಾರಿಯನ್ನು ದಿನಾಂಕ 20-11-2017 ರ ಒಳಗಾಗಿ ಮುಕ್ತಾಯಗೊಳಿಸಿ ಅನುಪಾಲನಾ ವರದಿಯನ್ನು ನೀಡುವಂತೆ ಶಾಖಾಧಿಕಾರಿ, ಗುತ್ತಲು ಶಾಖೆ ರವರಿಗೆ ನಿರ್ದೇಶಿಸಲಾಯಿತು.
3. ಶ್ರೀ ವೆಂಕಟರಾಮು, ಗುತ್ತಿಗಾನಹಳ್ಳಿ, ಬೇಬಿ ಪಂಚಾಯಿತಿ, ಬಸರಾಳು ಹೋಬಳಿ, ಮಂಡ್ಯ ತಾಲ್ಲೂಕು ರವರು ತಮ್ಮ ಕಾಲೋನಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಮನವಿ ಸಲ್ಲಿಸಿದರು. ವ್ಯಾಪ್ತಿಯು ಕೆರಗೋಡು ಉಪ ವಿಭಾಗ ವ್ಯಾಪ್ತಿಗೆ ಒಳಪಡುವುದರಿಂದ ಮನವಿ ಪತ್ರವನ್ನು ಪಡೆದು ಸಂಬಂಧಪಟ್ಟ ಉಪ ವಿಭಾಗಕ್ಕೆ ವರ್ಗಾಯಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಯಿತು.

ಶ್ರೀ ಬಿ. ಶಿವಮಾದಯ್ಯ, ಸಲೆ ಪ್ರಭಾರ ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮಧ್ಯಾಹ್ನ 1.30 ಕ್ಕೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಮಂಡ್ಯ ಉಪ ವಿಭಾಗ, ಮಂಡ್ಯ

ಪ್ರತಿಯನ್ನು ಸಲ್ಲಿಸಲಾಗಿದೆ.

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ವಲಯ, ದಟ್ಟಗಳ್ಳಿ ಮೈಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಮಂಡ್ಯ ವೃತ್ತ ಮಂಡ್ಯರವರ ಮಾಹಿತಿಗಾಗಿ
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಮಂಡ್ಯ ವಿಭಾಗ, ಮಂಡ್ಯರವರ ಮಾಹಿತಿಗಾಗಿ

ಪ್ರತಿಗಳನ್ನು ಕಳುಹಿಸಿದೆ.

1. ಲೆಕ್ಕಾಧಿಕಾರಿ (ಆಂ.ಪ), ಸೆಸ್ಕ್, ಮಂಡ್ಯ ವಿಭಾಗ, ಮಂಡ್ಯರವರ ಮಾಹಿತಿಗಾಗಿ
2. ಎಲ್ಲಾ ಶಾಖಾಧಿಕಾರಿಗಳು, ಮಂಡ್ಯ ಉಪ ವಿಭಾಗ, ಸೆಸ್ಕ್, ಮಂಡ್ಯ ರವರ ಮಾಹಿತಿಗಾಗಿ.

ಸಲೆ(ಕ) / ಮು ಕ